

(6ನೇ ಪುಟದಿಂದ)

ಬೆಂಗಳೂರಿನಲ್ಲಿ ಇತ್ತೀಚೆಗೆ ಏರ್ಪಡಿಸಿದ್ದ ತೊಗಲು ಬೊಂಬೆಯಾಟ ಮೇಳವನ್ನು ನೋಡಿದಾಗ ಮನಸ್ಸು ವರ್ಷಗಳ ಹಿಂದಕ್ಕೆ ಜಾರಿತು. ಕೇಂದ್ರ ಸಂಗೀತ ನಾಟಕ ಅಕಾಡೆಮಿ, ಕರ್ನಾಟಕ ಜಾನಪದ ಅಕಾಡೆಮಿ ಜಂಟಿಯಾಗಿ ಬೆಂಗಳೂರಿನ ಸ್ವತಂತ್ರ ಉದ್ಯಾನದಲ್ಲಿ ಐದು ದಿನಗಳ ಬೊಂಬೆಯಾಟ ಪರಂಪರೆ– ಕರ್ನಾಟಕ ಉತ್ಸವವನ್ನು ಏರ್ಪಡಿಸಿದ್ದು, ಕಲೆಯ ಉಳಿವಿಗೆ ಚೇತೋಹಾರಿಯಾಗಿತ್ತು.

ಹಾಗೆ ನೋಡಿದರೆ, 80–90ರ ದಶಕದಲ್ಲಿ ತೊಗಲು ಬೊಂಬೆಯಾಟ ಜನರ ಪ್ರಮುಖ ಮನರಂಜನಾ ಪ್ರಕಾರವಾಗಿತ್ತು. ಮೊದಲು ಮಕ್ಕಳ ರಂಜನೆಗಾಗಿ ಹುಟ್ಟಿಕೊಂಡ ಈ ಆಟ, ಮುಂದೆ ಒಂದು ಬಹುಮುಖ್ಯ ಜಾನಪದ ಕಲಾ ಪ್ರಕಾರವಾಗಿ ಬೆಳೆದದ್ದು ಈಗ ಇತಿಹಾಸ. ಒಂದು ಕಾಲಕ್ಕೆ ಕಲಾ ಜಗತ್ತಿನ ಮಹತ್ವದ ಪ್ರಕಾರವಾಗಿದ್ದ ಈ ಕಲೆ ಕ್ರಮೇಣ ಯಾಂತ್ರಿಕ ಬದುಕಿನ ತಾಂತ್ರಿಕ ಬೆಳವಣಿಗೆಗಳಿಂದಾಗಿ ತೆರೆಮರೆಗೆ ಸರಿಯತೊಡಗಿದ್ದು ವಿಷಾದದ ಸಂಗತಿಯೇ.

ಆಂಧ್ರದ ಬಹುತೇಕ ಗಡಿ ಭಾಗಗಳ ಗ್ರಾಮಾಂತರ ಪ್ರದೇಶಗಳಲ್ಲಿ ನೆಲೆಸಿದ್ದ 'ಕಿಳ್ಳೆಕ್ಯಾತ' ಜನಾಂಗದ ಕೆಲ ಕುಟುಂಬಗಳು ತಮ್ಮ ಸಾಮಗ್ರಿಗಳ ಸಮೇತ ವರ್ಷಪೂರ್ತಿ ಅಲೆಮಾರಿಗಳಂತೆ ತಿರುಗಿ ಅಲ್ಲಲ್ಲಿ ಟೆಂಟು ಹಾಕಿ ಬೊಂಬೆಯಾಟ ಪ್ರದರ್ಶನ ನೀಡುತ್ತ ಸಾಗುತ್ತಿದ್ದರು. ಗ್ರಾಮಸ್ಥರು ಅವರಿಗೆ ದವಸ, ಧಾನ್ಯ, ಕಾಳು ಬೇಳೆಗಳನ್ನು ನೀಡುತ್ತಿದ್ದರು. ಕೆಲವೊಮ್ಮೆ ಅವರ ಪ್ರದರ್ಶನದಿಂದ ಹರ್ಷಗೊಂಡ ಗ್ರಾಮದ ಶ್ರೀಮಂತರು ಅವರಿಗೆ ಕುರಿಮರಿ, ಕೋಳಿಯಂತಹ ಸಾಕು ಪ್ರಾಣಿಗಳನ್ನು ನೀಡಿ ಪ್ರೋತ್ಸಾಹಿಸುತ್ತಿದ್ದುದೂ ಉಂಟು.

ವಿವಿಧ ಸಂದರ್ಭಗಳಲ್ಲಿ ಅವರನ್ನು ಗ್ರಾಮಕ್ಕೆ ಕರೆಯಿಸಿಕೊಳ್ಳುವ ಪರಿಪಾಠವೂ ಇತ್ತು. ಆಯಾ ಸಂದರ್ಭಕ್ಕೆ ತಕ್ಕಂತೆ ಅವರು ವಿಷಯ ಆಯ್ಕೆ ಮಾಡಿಕೊಂಡು ಪ್ರದರ್ಶನ ನೀಡುತ್ತಿದ್ದರು. ಶೋಕ ಸಂದರ್ಭವಿದ್ದರೆ ಅಂಥದ್ದೇ ಆಟ, ಮದುವೆಯಂತಹ ಸಂತಸದ ಘಳಿಗೆಗೆ ಗಿರಿಜಾ ಕಲ್ಯಾಣ ಪ್ರಸಂಗದಂತಹ ಆಟಗಳನ್ನು ಆಡುತ್ತಿದ್ದರು.

ಕಿಳ್ಳೆಕ್ಯಾತರ ಇಡೀ ಕುಟುಂಬವೇ ಈ ಕಲೆಯನ್ನು ಕರಗತ ಮಾಡಿಕೊಂಡಿರುತ್ತದೆ. ಸ್ತ್ರೀ ಪಾತ್ರಗಳಿಗೆ ಸ್ತ್ರೀಯರೇ ದನಿ ನೀಡುತ್ತಾರೆ. ಬಹುತೇಕ ಎಲ್ಲಾ ಹಾಡುಗಳನ್ನೂ ಸ್ತ್ರೀಯರೇ ಹಾಡುತ್ತಾರೆ. ಇವರೆಲ್ಲಾ ಪರದೆಯ ಹಿಂದಿದ್ದು, ಅಂದಿನ ಕಾಲಕ್ಕೆ ಚಿಮಣಿ ದೀಪಗಳ ಸಹಾಯದಿಂದ ಬೆಳಕನ್ನು ನಿಯಂತ್ರಿಸುತ್ತಿದ್ದರು. ಇಂದು ವಿದ್ಯುತ್ ದೀಪಗಳ ಸಹಾಯವಿದೆ. ಒಬ್ಬ ವ್ಯಕ್ತಿ ಏಕಕಾಲಕ್ಕೆ ಎರಡು ಬೊಂಬೆಗಳನ್ನು ಕುಣಿಸುವುದು ಸಾಮಾನ್ಯ.

ಬೊಂಬೆ ಆಡಿಸುವುದು ಎಲ್ಲರಿಂದಲೂ ಸಾಧ್ಯವಾಗುವ ಕೆಲಸವಲ್ಲ. ಅದೊಂದು ಮನೋಜ್ಞ ಕಲೆ. ಅಂತೆಯೇ ಬೊಂಬೆಗಳನ್ನು ತಯಾರಿಸುವುದೂ ಒಂದು ಕಲೆ. ವಿಶೇಷ ಕಾಳಜಿ, ಚಾಕಚಕ್ಯತೆ, ಕರಕೌಶಲ್ಯದ ವಿಶಿಷ್ಟ ಶೈಲಿ ಅಗತ್ಯ. ಹೆಸರೇ ಹೇಳುವಂತೆ ಈ ಬೊಂಬೆಗಳನ್ನು ಪ್ರಾಣಿಗಳ ಚರ್ಮದಿಂದ ತಯಾರಿಸಲಾಗುತ್ತದೆ. ವಿವಿಧ ಪಾತ್ರಗಳಿಗೆ ಅನುಗುಣವಾಗಿ ಚರ್ಮಗಳನ್ನು ಕತ್ತರಿಸಿ ಆಕರ್ಷಕ ಬಣ್ಣಗಳಿಂದ ಅವುಗಳಿಗೆ ವಿವಿಧ ರೂಪಗಳನ್ನು ನೀಡಲಾಗುತ್ತದೆ. ಅವುಗಳ ಕೈ–ಕಾಲು, ಕುತ್ತಿಗೆಗಳನ್ನು ಪ್ರತ್ಯೇಕವಾಗಿ ಕತ್ತರಿಸಿ ಬಣ್ಣ ಹಚ್ಚಿ ನಂತರ ಅವುಗಳನ್ನು ದಾರದಿಂದ ಕಟ್ಟಲಾಗುತ್ತದೆ. ಬಿದಿರು ಕಡ್ಡಿಗಳ ಮೂಲಕ ಅವುಗಳ ದೇಹವನ್ನು ನಿಲ್ಲಿಸಿ ಕುಣಿಸಲಾಗುತ್ತದೆ.



ಬೊಂಬೆಗಳ ಜತೆ ಬಳಿಗಾರ್, ಕಂಬಾರ, ಗೊರುಚ

ಕಾಲ ಬದಲಾಗುತ್ತಿದೆ. ಈ ಕಲೆಯೂ ಕಣ್ಮರೆಯಾಗುತ್ತಿದೆ. ರಾಜ್ಯದಲ್ಲಿ ಸುಮಾರು 345ರಷ್ಟಿದ್ದ ಬೊಂಬೆಯಾಟಗಾರರ ಕುಟುಂಬಗಳ ಸಂಖ್ಯೆ ಈಗ ಕೇವಲ 45ಕ್ಕೆ ಇಳಿದಿದೆ. ಇಂದಿನ ಮಕ್ಕಳಿಗೆ ಟಿವಿ, ಕಂಪ್ಯೂಟರ್ ನೀಡುವ ಮನರಂಜನೆಯ ಮುಂದೆ ಇಂತಹ ಕಲಾ ಪ್ರಕಾರಗಳು ತೀರ ಸಪ್ಪೆಯಾಗಿ ಕಾಣಬಹುದು. ಹಾಗೆಂದು ಈ ಕಲೆಗಳನ್ನು ನಿರ್ಲಕ್ಷಿಸಲಾದೀತೇ? ಇಂತಹ ವಿಶಿಷ್ಟ ಕಲಾ ಪ್ರಕಾರವೊಂದಕ್ಕೆ ಮರುಜೀವ ತುಂಬಿ ಬೆಳೆಸುವ ಕಾರ್ಯವನ್ನು ಇದೀಗ ಕೇಂದ್ರ ಸರ್ಕಾರ ಮಾಡುತ್ತಿದ್ದು, ಕರ್ನಾಟಕ ಜಾನಪದ ಅಕಾಡೆಮಿ ಇದಕ್ಕೆ ಕೈಜೋಡಿಸಿದೆ. ಬೆಂಗಳೂರಿನಲ್ಲಿ ಐದು ದಿನಗಳ ವಿಶೇಷ ಮೇಳವನ್ನು ಆಯೋಜಿಸಿ, ಐದು ದಿನಗಳ ಕಾಲ ತೊಗಲು ಬೊಂಬೆಯಾಟ ಕಲೆಯ ಪ್ರದರ್ಶನ, ದಾಖಲೀಕರಣ, ವಿಚಾರ ಗೋಷ್ಠಿಗಳು ನಡೆಸಿದ್ದು ಈ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ. ಉತ್ಸವದಲ್ಲಿ ಸುಮಾರು 40ಕ್ಕೂ ಅಧಿಕ ಬೊಂಬೆಯಾಟ ತಂಡಗಳು, 350ರಷ್ಟು ಜಾನಪದ ಕಲಾವಿದರು, 25ಕ್ಕೂ ಅಧಿಕ ಜಾನಪದ ತಜ್ಞರು ಪಾಲ್ಗೊಂಡಿದ್ದರು.